ನಿಪ್ಪಾಣಿ ಮತಕ್ಷೇತ್ರದ ಗಳತಗಾ, ಬೇಡಕಿಹಾಳ, ಬೋರಗಾವ, ಕಾರದಗಾ, ನಿಪ್ಪಾಣಿ, ಅಕ್ಕೋಳ, ಬೋಜ, ಮಾಂಗೋರ ಸ್ಥಳಗಳಲ್ಲಿ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳನ್ನು ಪ್ರಾರಂಭಿಸುವಂತೆ ಕೋರಿಕೆಗಳು ಸ್ವೀಕೃತವಾಗಿದೆ. ಈ ಪ್ರಸ್ತಾವನೆಗಳನ್ನು ನಿಪ್ಪಾಣಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಗೌರವಾನ್ವಿತ ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾ ಸಾಹೇಬ್ ಇವರು ದಿ:01.01.2014ರಲ್ಲಿ ಸಲ್ಲಿಸಿರುತ್ತಾರೆ.

ಈ) ಪರಿಶೀಲನಾ ಹಂತದಲ್ಲಿದೆ. ಇನ್ನೂ ನಿರ್ಧರಿಸಿಲ್ಲ.

ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟ

1474(191), ಶ್ರೀ ಕೋಳಿವಾಡ ಕೆ.ಬಿ.(ರಾಣೇಬೆನ್ನೂರು)

ಅ) ರಾಜ್ಯದ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟ ಹಾಗೂ ಕ್ಷೀರಭಾಗ್ಯ ಯೋಜನೆಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿವೆಯೇ;

ಆ) ಶಾಲೆಗಳಲ್ಲಿ ಅಡುಗೆ ಮಾಡುವ ಹಾಗೂ ಹಾಲು ಕೊಡುವ ವ್ಯವಸ್ಥೆಯಲ್ಲಿ ಶಿಕ್ಷಕರೂ ಮಗ್ನರಾಗಿದ್ದು, ಮಕ್ಕಳಿಗೆ ಸರಿಯಾದ ಶಿಕ್ಷಣ ಸಿಗದೆ ಇರುವ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇದಕ್ಕೆ ಬೇರೆ ಏನಾದರೂ ಪರ್ಯಾಯ ವ್ಯವಸ್ಥೆ ಕಲ್ಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಕಿಮ್ಮನೆ ರತ್ನಾಕರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಹೌದು.

ಆ) ಹಾಗೇನಿಲ್ಲ.

ಈ ಎರಡೂ ಯೋಜನೆಗಳ ಅನುಷ್ಠಾನಕ್ಕಾಗಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆಗನುಗುಣವಾಗಿ ಅಡುಗೆ ಸಹಾಯಕರನ್ನು ನೇಮಕ ಮಾಡಲಾಗಿದೆ.

ಶಾಲೆಗಳಲ್ಲಿ ಮಕ್ಕಳಿಗೆ ಊಟ ಹಾಗೂ ಹಾಲನ್ನು ವಿತರಿಸುವ ವೇಳೆ ಮೇಲ್ವಿಚಾರಣೆ ಮಾಡುವ ಕಾರ್ಯವನ್ನು ಮಾತ್ರ ಶಿಕ್ಷಕರಿಗೆ ವಹಿಸಲಾಗಿದೆ.

ಶಿಕ್ಷಕರಿಗೆ ಹೊರೆಯಾಗಬಾರದೆಂದು ಶಾಲೆಯ ಮುಖ್ಯ ಅಡುಗೆಯವರಿಗೆ ತರಬೇತಿ ನೀಡಲಾಗುತ್ತಿದೆ. ಆದ್ದರಿಂದ ಪರ್ಯಾಯ ವ್ಯವಸ್ಥೆ ಕಲ್ಪಿಸುವ ಅಗತ್ಯವಿಲ್ಲ.

ಪ್ರಾಥಮಿಕ ಶಿಕ್ಷಕರ ವಿಶೇಷ ತರಬೇತಿ

1475(2356), ಶ್ರೀ ಕೃಷ್ಣಾರೆಡ್ಡಿ ಎಂ.(ಚಿಂತಾಮಣಿ)

ಅ) 2012–13ನೇ ಸಾಲಿನಲ್ಲಿ ಚಿಂತಾಮಣಿ ತಾಲ್ಲೂಕಿನ ಬ್ಲಾಕ್‌ನಲ್ಲಿ ನಡೆದ ಪ್ರಾಥಮಿಕ ಶಿಕ್ಷಕರ ವಿಶೇಷ ತರಬೇತಿಗೆ ಅನುದಾನವನ್ನು ಬಿಡುಗಡೆ ಮಾಡದೇ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಅನುದಾನವನ್ನು ಈ ತನಕ ನೀಡದಿರುವುದಕ್ಕೆ ಕಾರಣಗಳೇನು;

ಇ) ವಿಶೇಷ ತರಬೇತಿಯ ಅನುದಾನವನ್ನು ಈ ತನಕ ಬಿಡುಗಡೆ ಮಾಡದ ಕ್ಷೇತ್ರ ಶಿಕ್ಷಣಾಧಿಕಾರಿಯ ಹಾಗೂ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು (ಪೂರ್ಣ ವಿವರ ನೀಡುವುದು);

ಈ) ವಿಶೇಷ ತರಬೇತಿಗಳ ಅನುದಾನವನ್ನು ಯಾವ ಕಾಲಮಿತಿಯೊಳಗೆ ಬಿಡುಗಡೆ ಮಾಡಲಾಗುವದು?

ಶ್ರೀ ಕಿಮ್ಮನೆ ರತ್ನಾಕರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)